# ಸೀರೆಗಳ ಆಯ್ಕೆ ಹೇಗಿರಬೇಕು?

ಬೇಸಿಗೆಯಲ್ಲಿ ಕೆಂಪು ಅಥವಾ ಕಪ್ಪು, ಚಳಿಗಾಲದಲ್ಲಿ ಮಂದವಾದ ಬಣ್ಣದ ಸೀರೆಗಳನ್ನು ಕೊಳ್ಳಬೇಕು. ಯಾವ ಕಾಲದಲ್ಲಿಯೇ ಆಗಲಿ, ತಮ್ಮ ಶರೀರದ ಬಣ್ಣವನ್ನು ಗಮನಿಸಿ ಸೀರೆಗಳನ್ನು ಖರೀದಿಸುವುದು ಉತ್ತಮ.



ಉಮಾ ಜಯಕುಮಾರ್
ಬ್ಯೂಟಿಶಿಯನ್




ಸೀರೆ ಕೊಳ್ಳುವವರೆಲ್ಲಾ ಸಂದರ್ಭಕ್ಕೆ, ಕಾಲಕ್ಕೆ, ತಮ್ಮ ಶರೀರದ ಬಣ್ಣಕ್ಕೆ ಒಪ್ಪುವಂತಹ ಸೀರೆ ಕೊಳ್ಳಬೇಕು.

ಬೇಸಿಗೆಗೆ ಕೆಂಪು ಅಥವಾ ಕಪ್ಪು ಬಣ್ಣದ ಸೀರೆ ಆಯ್ಕೆ ಸಮಂಜಸ. ಈ ಬಣ್ಣಗಳು ಬಿಸಿಲಿನ ಶಾಖವನ್ನು ಬೇಗನೇ ಹೀರುತ್ತವೆ. ಮಳೆಗಾಲ ಮತ್ತು ಚಳಿಗಾಲದಲ್ಲಿ ಮಂದವಾದ ಬಣ್ಣದ ಸೀರೆಗಳನ್ನು ಕೊಂಡರೆ ಉತ್ತಮ.

ಅತಿ ಕಪ್ಪು ಬಣ್ಣವುಳ್ಳವರು, ತಿಳಿ ಬಣ್ಣಗಳ ಸೀರೆಗಳನ್ನು ಕೊಳ್ಳುವುದು ಉತ್ತಮ. ಇವರು ಅಚ್ಚ ಬಿಳಿಯ ಸೀರೆಗಳನ್ನು ಮತ್ತು ಮಂದವಾದ ಬಣ್ಣಗಳ ಸೀರೆಗಳನ್ನು ಆರಿಸದೇ ಇರುವುದೇ ಲೇಸು.

ಕಪ್ಪು ಬಣ್ಣದವರಿಗೆ ಬಾದಾಮಿ, ತಿಳಿ ನೀಲಿ, ನಸು ಹಸಿರು, ನಸು ಗುಲಾಬಿ, ಆನಂದ, ನಸು ಮೆಜಂತಾ, ಕನಕಾಂಬರ, ನಸು ಹಳದಿ ಸೀರೆಗಳು ಒಳ್ಳೆಯದು.

ಕಪ್ಪು, ಕೆಂಪು ಮಿಶ್ರಿತ ಬಣ್ಣದವರು ಬೂದು ಬಣ್ಣ, ಕೋಕೋ ಬಣ್ಣ, ಆಕಾಶ ನೀಲಿ, ಈರುಳ್ಳಿ ಬಣ್ಣ ಮತ್ತು ಬಿಳಿ ಬಣ್ಣದ ಸೀರೆಗಳಲ್ಲಿ ದೊಡ್ಡ ದೊಡ್ಡ ಹೂಗಳಿದ್ದರೂ ಶೋಭಿಸುವುದು.

ಬಿಳಿ ಬಣ್ಣದವರು ಕಡು ನೀಲಿ, ಕಡು ಹಸಿರು, ಟೊಮೆಟೊ ಕೆಂಪು, ಕಪ್ಪು ಸೀರೆಯಲ್ಲಿ ಬಿಳಿಯ ಹೂಗಳು, ನೇರಳೆ, ಮಜಂತಾ ಎಲ್ಲಾ ಬಣ್ಣದ ಸೀರೆಗಳನ್ನು ಆಯ್ಕೆ ಮಾಡಿ. ಅತೀ ಬಿಳಿಯ ಬಣ್ಣ ಇರುವವರು ತಿಳಿ ಬಣ್ಣದ ಸೀರೆಗಳನ್ನು ಕೊಂಡರೆ ಸೀರೆಯ ಮತ್ತು ಉಡುವವರ ಸೌಂದರ್ಯ ಎದ್ದು ಕಾಣುವುದಿಲ್ಲ.

### ಎಂಥವರಿಗೆ ಎಂಥ ಸೀರೆ?

ಇನ್ನು ತಮ್ಮ ಶರೀರದ ಗಾತ್ರಕ್ಕನುಗುಣವಾಗಿ ಸೀರೆಗಳನ್ನು ಕೊಳ್ಳುವುದು ಸೂಕ್ತ. ಸ್ಥೂಲಕಾಯದವರು ತೆಳುವಾದ ಸೀರೆಗಳನ್ನು ಆರಿಸಬೇಕು. ಇಂತಹ ಸೀರೆಗಳನ್ನು ಉಡುವುದರಿಂದ ಅವರ ದೇಹದ ಗಾತ್ರ ಹೆಚ್ಚಾಗಿ ಕಾಣುವುದಿಲ್ಲ. ಅಲ್ಲದೇ ಅವರಿಗೆ ಓಡಾಡುವಾಗ, ಕೆಲಸ ಮಾಡುವಾಗ ಆಯಾಸವೂ ಆಗುವುದಿಲ್ಲ.

ಸಣ್ಣಗಿರುವವರು ಪಾಲಿಯೆಸ್ಟರ್, ಟೆರಿನ್, ಗಂಜಿ ನೀರು ಹಾಕಿ ಇಸ್ತ್ರಿ ಮಾಡಿಸಿದ ಪ್ರಿಂಟೆಡ್ ರೇಷ್ಮೆ ಸೀರೆಗಳನ್ನೂ, ಸುಮಾರು ದಪ್ಪನಾದ ಸೀರೆಗಳನ್ನು ಉಡುವುದರಿಂದ ಅವರ ದೇಹದ ಅಂದ ಹೆಚ್ಚುತ್ತದೆ. ಸಣ್ಣ ಸಣ್ಣ ಹೂಗಳಿರುವ ಸೀರೆಗಳೂ ಸುಂದರವಾಗಿರುತ್ತದೆ.

ಮಧ್ಯಮ ಕಾಯದವರು ಯಾವ ಸೀರೆಯನ್ನು ಬೇಕಾದರೂ ಉಡಬಹುದು. ಉದ್ದವಿರುವಂತಹ ಮಹಿಳೆಯರು ದೊಡ್ಡ ಅಂಚಿನ ಸೀರೆಗಳನ್ನೂ ಉಡುವುದರಿಂದ ಅಂಚಿನ ಸೌಂದರ್ಯ ಚೆನ್ನಾಗಿ ಕಾಣುತ್ತದೆ. ರೇಷ್ಮೆ ಸೀರೆಯಲ್ಲಿ ಜರಿ, ಅಥವಾ ಅಂಚುಳ್ಳ ಸೀರೆ ಉಡುವುದಾದರೆ ಅವುಗಳ ಅಂಚು ದೊಡ್ಡದಾಗಿರಬೇಕು. ಗಿಡ್ಡ ಇರುವವರು ಸಣ್ಣ ಬಾರ್ಡರಿನ ಸೀರೆ ಉಡುವುದರಿಂದ ಅವರ ಚಂದ ಹೆಚ್ಚುತ್ತದೆ. ನೂಲಿನ ಸೀರೆ ಯಾವುದೇ ಇರಲಿ ಅವುಗಳನ್ನು ಗಂಜಿ ನೀರು ಹಾಕಿ, ಇಸ್ತ್ರಿ ಮಾಡಿಯೇ ಉಡಬೇಕು.

ಸಾಮಾನ್ಯವಾಗಿ ಕಾಲೇಜು ತರುಣಿಯರು, ನೌಕರಿಗೆ ಹೋಗುವಂತಹವರು ನೂಲಿನ ಸೀರೆಯನ್ನು ಜಾಸ್ತಿ ಉಡುತ್ತಿರುವುದನ್ನು ನಾವು ನೋಡಬಹುದು. ಕಾರಣ ಸೀರೆಯು ತಮ್ಮಲ್ಲಿಯೇ ಕಲೆಯ ಅಂದವನ್ನು ಮೈಗೂಡಿಸಿಕೊಂಡು ಉಡುವವರ ದೇಹಕ್ಕೆ ಭಾರವೆನಿಸದೆ ಹಗುರವಾಗಿರುತ್ತದೆ. ಅಲ್ಲದೆ, ಮಳೆಗಾಲ, ಬಿಸಿಲು ಕಾಲ, ಚಳಿಗಾಲದಲ್ಲಿಯೂ ಸಹ ಈ ಸೀರೆಗಳನ್ನು ಉಡಬಹುದು.



ಸೀರೆಯ ಅಂದ ಹೆಚ್ಚುವಿಕೆ ಅಥವಾ ತಗ್ಗುವಿಕೆ ಅದನ್ನು ಉಡುವವರ ವೈಖರಿಯನ್ನು ಅವಲಂಬಿಸಿರುತ್ತವೆ. ಯಾವುದೇ ಸೀರೆಯನ್ನಾಗಲೀ ನೆಲ ತಾಗುವಂತೆ ಉಡಬಾರದು. ಬಸ್ಸುಗಳನ್ನು ಹತ್ತುವಾಗ ಕಾಲಿಗೆ ಸಿಕ್ಕಿ ಹರಿಯುವ ಸಂಭವವಿದೆ. ಅಲ್ಲದೇ, ಬಿರುಸಾಗಿ ನಡೆಯುವುದರಿಂದಲೂ ಸೀರೆಯು ಹರಿದು ಹೋಗಬಹುದು. ನಾಜೂಕಿನ ಸೀರೆಗಳನ್ನುಟ್ಟುಕೊಂಡು ಬಿಸಿ ಪದಾರ್ಥ, ಉರಿಯುತ್ತಿರುವ ಒಲೆಗಳ ಹತ್ತಿರ ಹೋಗಬಾರದು. ■